# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 257 (356)
2. ಪ್ರಶ್ನೆ ಮಂಡಿಸಿರುವವರು : ಶಶಿಲ್ ಜಿ ನಮೋಶಿ
3. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಯವರು
4. ಉತ್ತರಿಸ ಬೇಕಾದ ದಿನಾಂಕ : 06/03/2025

| ಪ್ರ.ಸಂ | ಪ್ರಶ್ನೆ | ಉತ್ತರ |
|---|---|---|
| 1 | ಮುಖ್ಯಮಂತ್ರಿ ಪರಿಹಾರ ನಿಧಿ ಅಡಿಯಲ್ಲಿ ಯಾವ ಯಾವ ಕಾಯಿಲೆಗಳಿಗೆ ಚಿಕಿತ್ಸೆ ಹಾಗೂ ಪರಿಹಾರ ಧನವನ್ನು ನೀಡಲಾಗುತ್ತದೆ ? ಚಿಕಿತ್ಸೆ ಹಾಗೂ ಪರಿಹಾರ ಧನಕ್ಕೆ ಇರುವ ನಿಯಮ ಹಾಗೂ ನಿಬಂಧನೆಗಳು ಯಾವುವು ? (ಸಂಪೂರ್ಣ ವಿವರಣೆ ನೀಡುವುದು) | ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಆರ್.ಟಿ.ಎ ಅಥವಾ ಎಂ.ಎಲ್.ಸಿ ಸಾಮಾನ್ಯ ಪ್ರಕರಣಗಳನ್ನು ಹೊರತುಪಡಿಸಿ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿರುವ / ಪಡೆಯಬೇಕಿರುವ ಬಿ.ಪಿ.ಎಲ್ ಕುಟುಂಬದ ಸದಸ್ಯರಿಗೆ ಮುಖ್ಯಮಂತ್ರಿಗಳು ಮಂಜೂರು ಮಾಡುವ ಪರಿಹಾರದ ಮೊತ್ತ ವಿತರಿಸಲು ಕ್ರಮ ವಹಿಸಲಾಗುತ್ತಿದೆ.<br>ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ವಿತರಿಸಲು ಅನುಸರಿಸುತ್ತಿರುವ ನಿಯಮಗಳ ಕುರಿತು ಅನುಬಂಧ-1 ರಲ್ಲಿ ಮಾಹಿತಿ ಒದಗಿಸಿದೆ. |
| 2 | ಒಬ್ಬ ವ್ಯಕ್ತಿಯು ಅಥವಾ ರೋಗಿಯು ತನ್ನ ಜೀವಿತಾವಧಿಯಲ್ಲಿ ಎಷ್ಟು ಬಾರಿ ಚಿಕಿತ್ಸೆಗೆ ಪರಿಹಾರ ಧನವನ್ನು ಪಡೆಯಬಹುದು ?<br>ಕೇವಲ ಒಂದು ಬಾರಿ ಎಂತಾದರೆ ಹೆಚ್ಚು ಪರಿಹಾರ ಧನ ಪಡೆದ ವ್ಯಕ್ತಿ ಹಾಗೂ ಕಡಿಮೆ ಪರಿಹಾರ ಧನ ಪಡೆದ ವ್ಯಕ್ತಿಗೆ ಒಂದೇ ನಿಯಮ ಎನ್ನುವುದು ಯಾವ ರೀತಿಯ ಮಾನದಂಡ ?ಈ ನಿಯಮದಿಂದ ತಾರತಮ್ಯವಾಗುವುದಿಲ್ಲವೆ ? ಒಬ್ಬ ವ್ಯಕ್ತಿಗೆ ಜೀವಿತಾವಧಿಯಲ್ಲಿ ಪರಿಹಾರ ಧನವನ್ನು ಒಂದು ಮಿತಿಗೆ ನಿರ್ಧರಿಸುವ ಆಲೋಚನೆ ಇದೆಯೇ ? (ವಿವರಣೆ ನೀಡುವುದು) | ಒಬ್ಬ ವ್ಯಕ್ತಿ ಅಥವಾ ರೋಗಿಯು ಒಂದು ಬಾರಿಗಿಂತ ಹೆಚ್ಚು ಬಾರಿ ಪರಿಹಾರ ಕೋರಿದಲ್ಲಿ ಅಂತಹ ಪ್ರಕರಣಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚುವರಿ ಎಂದು ಆದೇಶಿಸಿದಲ್ಲಿ, ಹೆಚ್ಚುವರಿ ಮೊತ್ತವನ್ನು ಅನುಬಂಧ-1 ರಲ್ಲಿ ತಿಳಿಸಿರುವ ನಿಯಮಗಳಂತೆ ಗರಿಷ್ಠ ನಿಗಧಿತ ಮೊತ್ತದ ಮಿತಿಗೆ ಸಾಮಾನ್ಯವಾಗಿ ಸೀಮಿತಗೊಳಿಸಿ ಪರಿಹಾರ ವಿತರಿಸಲು ಕ್ರಮ ವಹಿಸಲಾಗುತ್ತಿದೆ.<br>ಪ್ರಸ್ತುತ ಒಬ್ಬ ವ್ಯಕ್ತಿಗೆ ಜೀವಿತಾವಧಿಯಲ್ಲಿ ಪರಿಹಾರ ಧನವನ್ನು ಒಂದು ಮಿತಿಗೆ ಸೀಮಿತಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| 3 | ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಕ್ಯಾನ್ಸರ್ ಹಾಗೂ ಕಿಡ್ನಿ ಸಂಬಂಧಿತ ಕಾಯಿಲೆಗಳಿಗೆ ಮಾತ್ರ ಔಷಧಿ ಹಾಗೂ ಚಿಕಿತ್ಸೆ ವೆಚ್ಚ ಎರಡನ್ನೂ ಪರಿಗಣಿಸಲಾಗುತ್ತಿದ್ದು, ಬೇರೆ ಬೇರೆ ಚಿಕಿತ್ಸೆಗಳ ವೆಚ್ಚವು ಹೆಚ್ಚಾಗಿದ್ದರೂ ಕೂಡ ಕೇವಲ ಚಿಕಿತ್ಸೆಗೆ ಮಾತ್ರ ಪರಿಹಾರ ಧನ ನೀಡಲು ಕಾರಣವೇನು ? ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ. | ಕ್ಯಾನ್ಸರ್ ಮತ್ತು ಕಿಡ್ನಿ ಸಂಬಂಧಿತ ಕಾಯಿಲೆಗಳು ಮಾರಣಾಂತಿಕ ಕಾಯಿಲೆಗಳಾಗಿದ್ದು, ಸದರಿ ಕಾಯಿಲೆಗಳಿಗೆ ಒಳಗಾದ ರೋಗಿಗಳು ಜೀವನ ಪರ್ಯಂತ ಚಿಕಿತ್ಸೆಯನ್ನು ಪಡೆಯಬೇಕಿರುತ್ತದೆ. ಕ್ಯಾನ್ಸರ್ ಕಾಯಿಲೆಗೆ ಕಿಮೋ ಥೆರಪಿ ಮತ್ತು ಕಿಡ್ನಿ ಸಂಬಂಧಿ ಕಾಯಿಲೆಗೆ ಡಯಾಲಿಸಿಸ್ ಚಿಕಿತ್ಸೆಯನ್ನು ನಿರಂತರ ಪಡೆಯಬೇಕಿರುವ ಹಿನ್ನೆಲೆಯಲ್ಲಿ ಕಿಮೋ ಥೆರಪಿ ಮತ್ತು ಡಯಾಲಿಸಿಸ್ ಬಿಲ್ಲುಗಳನ್ನು ಮತ್ತು ಔಷಧಿ ಬಿಲ್ಲುಗಳನ್ನು ಪರಿಗಣಿಸಲಾಗುತ್ತಿದೆ. |

ಸಿಎಂ/42/ಸಿಎಂಆರ್‌ಎಫ್/ಜಿಇಎನ್/2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ

**ಅನುಬಂಧ-1**

## ಮುಖ್ಯಮಂತ್ರಿಗಳ ಪರಿಹಾರ ನಿಧಿ

ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ವಿತರಿಸಲು ಅನುಸರಿಸಲಾಗುತ್ತಿರುವ ನಿಯಮ ಮತ್ತು ನಿಬಂಧನೆಗಳು

1) ವೈದ್ಯಕೀಯ ಚಿಕಿತ್ಸಾ ವೆಚ್ಚಕ್ಕಾಗಿ ಪರಿಹಾರ ಕೋರಿ ಸಲ್ಲಿಸಲಾಗುವ ಅರ್ಜಿಯೊಂದಿಗೆ ಕಡ್ಡಾಯವಾಗಿ ಬಿ.ಪಿ.ಎಲ್ ಪಡಿತರ ಚೀಟಿ ಅಥವಾ ರೂ.75,000/-ಗಳ ಆದಾಯ ಪ್ರಮಾಣ ಪತ್ರವನ್ನು ಪಡೆಯುವುದು.
2) ವಿಳಾಸ ದೃಢೀಕರಣಕ್ಕಾಗಿ ಮತ್ತು ಬ್ಯಾಂಕ್ ಖಾತೆಯ ಮಾಹಿತಿಗಾಗಿ ಆಧಾರ್ ಗುರುತಿನ ಚೀಟಿ / ಚುನಾವಣಾ ಗುರುತಿನ ಚೀಟಿಯನ್ನು ಹಾಗೂ ಬ್ಯಾಂಕ್ ಪಾಸ್ ಪುಸ್ತಕದ ವಿವರವುಳ್ಳ ಪುಟದ ಪ್ರತಿಗಳನ್ನು ಪಡೆಯುವುದು.
3) ವೈದ್ಯಕೀಯ ಚಿಕಿತ್ಸೆ ಪಡೆದು ಪರಿಹಾರ ಕೋರಿ ಸಲ್ಲಿಸಲಾಗುವ ಅರ್ಜಿಯೊಂದಿಗೆ ಆಸ್ಪತ್ರೆಯ ಚಿಕಿತ್ಸಾ ವೆಚ್ಚದ ಅಂತಿಮ ಮೂಲ ಬಿಲ್ಲುಗಳನ್ನು ಮತ್ತು ಬಿಡುಗಡೆ ಸಾರಾಂಶ ಪತ್ರ ಪ್ರತಿಯನ್ನು ಪಡೆಯುವುದು. ಅನಧಿಕೃತ ಔಷಧಾಲಯಗಳ ಬಿಲ್ಲುಗಳನ್ನು ಪರಿಗಣಿಸಬಾರದು. (ಬಿಲ್ಲುಗಳು ಮುದ್ರಿತ ದಿನಾಂಕ ದಿಂದ ಒಂದು ವರ್ಷದೊಳಗಿರಬೇಕು.)
4) ವೈದ್ಯಕೀಯ ಚಿಕಿತ್ಸೆಯನ್ನು ಪಡೆಯಬೇಕಾಗಿರುವ ಅರ್ಜಿದಾರರು ಸಲ್ಲಿಸುವ ಅರ್ಜಿಯೊಂದಿಗೆ ಆಸ್ಪತ್ರೆಯ ಚಿಕಿತ್ಸಾ ವೆಚ್ಚದ ಮೂಲ ಅಂದಾಜು ಪಟ್ಟಿಯನ್ನು ಪಡೆಯುವುದು. (ಚಿಕಿತ್ಸಾ ವೆಚ್ಚದ ಮುದ್ರಿತ ದಿನಾಂಕದಿಂದ ಒಂದು ತಿಂಗಳೊಳಗೆ ಇರಬೇಕು)
5) ಮಾರಣಾಂತಿಕ ಕಾಯಿಲೆಗಳಿಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳು ಮಂಜೂರು ಮಾಡಿರುವ ಮೊತ್ತ ಅಥವಾ ಒಟ್ಟು ಮೂಲ ಬಿಲ್ಲುಗಳ / ಚಿಕಿತ್ಸಾ ವೆಚ್ಚದ ಅಂದಾಜು ಪಟ್ಟಿಯ ಶೇ 50ರಷ್ಟು, ರೂ.2.00ಲಕ್ಷಗಳಿಗೆ ಸೀಮಿತಗೊಳಿಸಿ, ಗಂಭೀರ ಕಾಯಿಲೆಗಳಿಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳು ಮಂಜೂರು ಮಾಡಿರುವ ಮೊತ್ತ ಅಥವಾ ಒಟ್ಟು ಮೂಲ ಬಿಲ್ಲುಗಳ / ಚಿಕಿತ್ಸಾ ವೆಚ್ಚದ ಅಂದಾಜು ಪಟ್ಟಿಯ ಶೇ 40ರಷ್ಟು, ರೂ.1.00ಲಕ್ಷಗಳಿಗೆ ಸೀಮಿತಗೊಳಿಸಿ ಬಿಡುಗಡೆ ಮಾಡಲು ಕ್ರಮ ವಹಿಸುವುದು. ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಪ್ರಕರಣವೆಂದು ಆದೇಶಿಸಿದಲ್ಲಿ ಪ್ರತ್ಯೇಕ ಕಡತ ಮಂಡಿಸಿ ಆದೇಶ ಪಡೆದು ಕ್ರಮ ವಹಿಸುವುದು.
6) ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಗಳಲ್ಲಿ ಪರಿಹಾರ ಪಡೆದಿರುವ ಫಲಾನುಭವಿಗಳು, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದಲೂ ಪರಿಹಾರ ಪಡೆಯಲು ಅರ್ಜಿ ಸಲ್ಲಿಸಿದಲ್ಲಿ, ಸದರಿ ಅರ್ಜಿದಾರರು ಬಳಲುತ್ತಿರುವ ಕಾಯಿಲೆಗಳ ಆಧಾರದ ಮೇಲೆ ಮತ್ತು ಇತರೇ ಯೋಜನೆಯಡಿ ಪಡೆದಿರುವ ಪರಿಹಾರದ ಮೊತ್ತವನ್ನು ಅವರು ಪಡೆದಿರುವ ಚಿಕಿತ್ಸಾ ವೆಚ್ಚಕ್ಕೆ ತಾಳೆ ಮಾಡಿ ಅರ್ಜಿದಾರರು ಭರಿಸಿರುವ ಮೊತ್ತಕ್ಕೆ ಅನುಗುಣವಾಗಿ ಅರ್ಹ ಮೊತ್ತವನ್ನು ಮಾರಣಾಂತಿಕ ಕಾಯಿಲೆಗಳಿಗೆ ರೂ.2.00ಲಕ್ಷಗಳನ್ನು ಹಾಗೂ ಗಂಭೀರ ಕಾಯಿಲೆಗಳಿಗೆ ರೂ.1.00ಲಕ್ಷಗಳನ್ನು ಸೀಮಿತಗೊಳಿಸಿ ಬಿಡುಗಡೆ ಮಾಡಲು ಕ್ರಮ ವಹಿಸುವುದು. ಖಾಸಗಿ ವಿಮಾ ಕಂಪನಿಗಳಿಂದ ಸೌಲಭ್ಯ ಪಡೆದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಬಾರದು.
7) ಚಿಕಿತ್ಸಾ ವೆಚ್ಚದ ಅಂದಾಜು ಪಟ್ಟಿ ಸಲ್ಲಿಕೆಯಾದಂತ ಪ್ರಕರಣಗಳಿಗೆ ಮಂಜೂರುಗೊಂಡ ಮೊತ್ತಕ್ಕೆ ಆಸ್ಪತ್ರೆಯ ಹೆಸರಿಗೆ ಭರವಸೆ ಪತ್ರವನ್ನು ವಿತರಿಸುವುದು. ಆಸ್ಪತ್ರೆಯಿಂದ ಮೂಲ ಅಂತಿಮ ಬಿಲ್ಲುಗಳು, ಬಿಡುಗಡೆ ಸಾರಾಂಶ ಪತ್ರದ ಪ್ರತಿ ಮತ್ತು ಬೇಬಾಕಿ ಪತ್ರ ಸಲ್ಲಿಕೆಯಾದ ನಂತರ ಆಸ್ಪತ್ರೆ / ಫಲಾನುಭವಿಯ ಹೆಸರಿಗೆ ಪರಿಹಾರದ ಮೊತ್ತವನ್ನು ಬಿಡುಗಡೆ ಮಾಡುವುದು. ಆಸ್ಪತ್ರೆಯ ಬಿಲ್ಲಿನ ಮೊತ್ತದಲ್ಲಿ ರಿಯಾಯಿತಿ, ದಾನಿಗಳ ನೆರವು, ಇತರೆ ಸಹಾಯ ಎಂದು ನಮೂದಿಸಲಾಗುವ ಮೊತ್ತವನ್ನು ಒಟ್ಟು ಬಿಲ್ಲುಗಳ ಮೊತ್ತದಲ್ಲಿ ಕಡಿತಗೊಳಿಸಿ, ಉಳಿದ ಮೊತ್ತವನ್ನು ಪರಿಗಣಿಸುವುದು ಹಾಗೂ ಅಂದಾಜು ಪಟ್ಟಿಯಲ್ಲಿ ನಮೂದಿಸಿರುವಂತ ಮೊತ್ತಕ್ಕಿಂತ ಕಡಿಮೆ ಬಿಲ್ಲುಗಳು ಸಲ್ಲಿಕೆಯಾದಲ್ಲಿ ಅನುಪಾತದಂತೆ ಲೆಕ್ಕ ಮಾಡಿ ಪರಿಹಾರ ಬಿಡುಗಡೆ ಮಾಡುವುದು.
8) ಅರ್ಜಿಗಳನ್ನು ಶಾಖೆಯಲ್ಲಿ ಸ್ವೀಕರಿಸಿದ ನಂತರ ಸ್ಕ್ರೂಟಿನಿ ಮಾಡಿ, ಬಿಲ್ಲುಗಳ / ಅಂದಾಜು ಚಿಕಿತ್ಸಾ ವೆಚ್ಚದಂತೆ ನಿಯಮಾನುಸಾರ ವಿವರ ನೊಂದಣಿ ಮಾಡಿ, ಜಂಟಿ ಕಾರ್ಯದರ್ಶಿಗಳಿಂದ ಕಡತ ಅನುಮೋದನೆ ಪಡೆದು, ನಂತರ ಪಟ್ಟಿಯನ್ನು ಸಿದ್ಧಪಡಿಸಿ, ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆ ಪಡೆದು ಪರಿಹಾರವನ್ನು ಡಿಬಿಟಿ ವ್ಯವಸ್ಥೆಯ ಮೂಲಕ ಬಿಡುಗಡೆ ಮಾಡುವುದು. ನಿಗದಿತ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸದೆ ಇದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ಸ್ವೀಕರಿಸಬಾರದು.

9) ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ವೈದ್ಯಕೀಯ ವೆಚ್ಚಕ್ಕೆ ಪರಿಹಾರ ಬಿಡುಗಡೆ ಮಾಡಲು ಆದೇಶವಾಗಿರುವ ಹಿನ್ನೆಲೆಯಲ್ಲಿ ಚಿಕಿತ್ಸೆ ಪಡೆದಿರುವ ವ್ಯಕ್ತಿಯು ಮೃತಪಟ್ಟ ನಂತರ ಪರಿಹಾರ ಕೋರಿ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಗಣಿಸಬಾರದು.

10) ಮೆಡಿಕೋ ಲೀಗಲ್ ಕೇಸ್ (ಎಂ.ಎಲ್.ಸಿ.), ಪ್ರಕರಣಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ಬಿಡುಗಡೆ ಮಾಡಲು ಪರಿಗಣಿಸಬಾರದು.

11) ಮಾನ್ಯ ಮುಖ್ಯಮಂತ್ರಿಗಳು ನೀಡುವ ಆಶ್ವಾಸನೆಗಳಂತೆ ಸದರಿ ಪ್ರಕರಣಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಆಯಾ ಜಿಲ್ಲಾಧಿಕಾರಿಗಳಿಂದ ವರದಿಯ ಮೂಲಕ ಪಡೆದು, ಕಡತದಲ್ಲಿ ಮಂಡಿಸಿ, ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆ ಪಡೆದು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಪರಿಹಾರ ಬಿಡುಗಡೆ ಮಾಡಲು ಆರ್ಥಿಕ ಸಹಾಯ ಕೋರಿ ಸಲ್ಲಿಕೆಯಾಗುವ ಅರ್ಜಿಗಳಿಗೆ ಸಂಬಂಧಿಸಿದಂತೆ ಅರ್ಜಿದಾರರ ಆರ್ಥಿಕ ಸ್ಥಿತಿ ಮತ್ತು ಪ್ರಕರಣದ ಕುರಿತು ಸಂಪೂರ್ಣ ಮಾಹಿತಿಯನ್ನು ಜಿಲ್ಲಾಧಿಕಾರಿಗಳ ವರದಿಯ ಮೂಲಕ ಪಡೆದು, ಕಡತದಲ್ಲಿ ಮಂಡಿಸಿ, ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆ ಪಡೆದು ನಂತರ ಕ್ರಮ ವಹಿಸುವುದು. ತುರ್ತು ಪ್ರಕರಣಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳ ಮೌಖಿಕವಾಗಿ ಆದೇಶಿಸುವಂತ ವಿಶೇಷ ಪ್ರಕರಣಗಳಿಗೆ ಪರಿಹಾರ ಬಿಡುಗಡೆ ಮಾಡಿ, ಘಟನೋತ್ತರ ಆದೇಶ/ಮಂಜೂರಾತಿಯನ್ನು ಕಡತದಲ್ಲಿ ಪಡೆಯುವುದು.

12) ಕೆರೆ, ಬಾವಿ, ನದಿ, ಹಳ್ಳ, ಸಮುದ್ರಗಳಲ್ಲಿ ಆಕಸ್ಮಿಕವಾಗಿ ಬಿದ್ದು ಮೃತಪಡುವ ವ್ಯಕ್ತಿಗಳ ಕುಟುಂಬಗಳಿಗೆ, ಜಾನುವಾರುಗಳು ಮೃತಪಟ್ಟಿರುವ, ಆಸ್ತಿ ಬೆಳೆ ನಷ್ಟವಾಗಿರುವಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಹಂತದಲ್ಲಿಯೇ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವುದು. ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ಬಿಡುಗಡೆ ಮಾಡಲು ಅವಕಾಶವಿರುವುದಿಲ್ಲ. ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳ ತೀರ್ಮಾನ ಮತ್ತು ಆದೇಶವೇ ಅಂತಿಮವಾಗಿರುತ್ತದೆ.

ಮುಖ್ಯಮಂತ್ರಿಗಳ ಪರಿಹಾರ ನಿಧಿ, ಮಾನ್ಯ ಮುಖ್ಯಮಂತ್ರಿಗಳ ವಿವೇಚನೆಗೆ ಒಳಪಟ್ಟ ನಿಧಿಯಾಗಿದ್ದು, ಈ ನಿಧಿಯಿಂದ ಪರಿಹಾರದ ಮೊತ್ತವನ್ನು ಚಿಕಿತ್ಸಾ ನಂತರದಲ್ಲಿ / ಚಿಕಿತ್ಸಾ ಪೂರ್ವದಲ್ಲಿ ಅಥವಾ ಮತ್ಯಾವುದೇ ಸಹಾಯ ಆರ್ಥಿಕ ಸಹಾಯ ಮಂಜೂರಾತಿ ಪ್ರಕರಣಗಳಲ್ಲಿ ಮಾನ್ಯ ಮುಖ್ಯಮಂತ್ರಿಯವರು ವಿಶೇಷ ಪ್ರಕರಣವೆಂದು ಭಾವಿಸುವ ಅಥವಾ ಯಾವುದೇ ವಿನಾಯಿತಿ ನೀಡಲು ಸೂಚಿಸುವ ಮತ್ತು ಪಟ್ಟಿಯಲ್ಲಿ ಅಥವಾ ವೈಯಕ್ತಿಕ ಕಡತದಲ್ಲಿ ಅನುಮೋದಿಸಿ, ಆದೇಶಿಸುವ ಮೊತ್ತವನ್ನು ಬಿಡುಗಡೆ ಮಾಡುವ ಕ್ರಮವನ್ನು ಮೊದಲಿನಿಂದಲೂ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದು, ಇದೇ ಪದ್ಧತಿಯನ್ನು ಮುಂದಿನ ದಿನಗಳಿಗೆ ಪಾಲಿಸುವುದು.

ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಂಬಂಧಿಸಿದ ಎಲ್ಲಾ ದಾಖಲೆ ಲೆಕ್ಕ ಪತ್ರಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸಬೇಕಾಗಿರುವ ಹಿನ್ನೆಲೆಯಲ್ಲಿ ಈ ಮೇಲ್ಕಂಡ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.

********